434

ಪ್ರಸಿದ್ಧ ಪತ್ರಿಕೆ.

ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಮಹಾಸ್ವಾಮಿಯವರ ಆಜ್ಞಾನುಸಾರ, ಆಳಿದ ಮಹಾಸ್ವಾಮಿಯವರಾದ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರವರಿಂದ ಕರ್ಣಾಟಕ ಭಾಷೆಯಲ್ಲಿ ವಾಕ್ಯರೂಪವಾಗಿ ವಿರಚಿತವಾದ ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಶ್ರೀಮನ್ಮಹಾಭಾರತದ ಕನ್ನಡದ ಟೀಕನ್ನು ಲೋಕೋಪಕಾರಾರ್ಥವಾಗಿರುವಂತೆ, 1884–85ನೇ ಇಸವಿಯಲ್ಲಿ ಮೈಸೂರು ಅರಮನೆಯ ಜಗನ್ಮೋಹನ ಮುದ್ರಾಕ್ಷರ ಶಾಲೆಯಲ್ಲಿ ವಿರಾಟಪರ್ವವನ್ನೂ ಉದ್ಯೋಗಪರ್ವವನ್ನೂ ಮುದ್ರಿಸಿ ಪ್ರಚಾರಪಡಿಸಿರುವ ವಿಷಯವು ಸರ್ವರಿಗೂ ವಿದಿತವಾಗಿರುವದಷ್ಟೆ.

ಶ್ರೀಮನ್ಮಹಾರಾಜರವರ ಆಜ್ಞೆಯಂ ಪಡೆದು ಉಳಿದಿದ್ದ ಹದಿನಾರು ಪರ್ವಗಳಲ್ಲಿ ಆದಿಪರ್ವವೂ ಸಭಾಪರ್ವವೂ ಬೆಂಗಳೂರಲ್ಲಿರುವ ಚಾಮುಂಡೇಶ್ವರಿ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟು ಈಗ ಕ್ರಯಕ್ಕೆ ಸಿದ್ಧವಾಗಿರುತ್ತದೆ.

ಈಗ ನಮ್ಮಲ್ಲಿ ಕರ್ಣಪರ್ವವು ಮುದ್ರಿಸಲ್ಪಟ್ಟು ಕ್ರಯಕ್ಕೆ ಸಿದ್ಧವಾಗಿರುತ್ತದೆ. ಇದರ ಕ್ರಯವು ಪ್ರತಿ ಬಂದಕ್ಕೆ ರೂಪಾಯಿ 1—12—0, ಟಪಾಲ್ ಹಾಸಲ್ ಸಹಿತ ರೂಪಾಯಿ 2—0—0, ಬೇಕಾದವರು ಈ ಕೆಳಗೆ ರುಜು ಮಾಡಿರುವವರಿಗೆ ಕ್ರಯವನ್ನು ಕಳುಹಿಸಿ ಬರೆದರೆ ಪುಸ್ತಕವು ದೊರಿಯುತ್ತದೆ. ಈಗ ಅರಣ್ಯಪರ್ವವು ಮುದ್ರಣೆಯಲ್ಲಿರುತ್ತದೆ.

ಮೈಸೂರು,
16ನೇ ಏಪ್ರಿಲ್ 1890.

ಬೆ. ಚಿ. ರಾಜಪ್ಪ,
ಮೈಸೂರಲ್ಲಿರುವ ಸರಕಾರದ ಬ್ಯಾಂಕ್ ಮುದ್ರಾಶಾಲೆಯ ಫೋರ್‌ಮ್ಯಾನ್.

ಹಾಸನ ಡಿಸ್ಟ್ರಿಕ್ಟು.

1890ನೇ ಇಸವಿ 2ನೇ ಜೂರ್ನ.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟು ಅರಸೀಕೆರೆ ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನು ಜಮಾ ಯಿಸಿಕೊಳ್ಳತಕ್ಕ ಹಕ್ಕುದಾರಿಯು ಸದರೀ ಅರಸೀಕೆರೆ ತಾಲ್ಲೂಕು ಕಛೇರಿಯಲ್ಲಿ ಸ್ನ 1890ನೇ ಇಸವಿ ಜುಲೈ ತಾರೀಖು 2ನೇ ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜ್ ಮಾಡಲ್ಪಡುವದು.

2. ಅಮಲ್ದಾರರು ಅಥವಾ ಶಿರಸ್ತೇದಾರರು ಹರಾಜ್ ಮಾಡಿಸುವರು.

3. ಈ ಹರಾಜಿನ ಜಿಡದರಖಾಸ್ತು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಡುವ ಪರಿಯಂತರ ಕಾಯಮಾದ್ದಾಗಿ ತಿಳಿದುಕೊಳ್ಳಕೂಡದು.

4. ಈ ಇಜಾರೆಯು ಸ್ನ 1891ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿ ಇರತಕ್ಕದ್ದು.

5. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನೆ ಡಿಪಾಜಿಟ್ ಇಡಬೇಕಲ್ಲದೆ ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಡೆಪ್ಯುಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟು ತಾರೀಖು ಮೊದಲು 7 ದಿವಸದ ವಳಗಾಗಿ ಕ್ರಯದ ವಟ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಬಂದಾಣೆಯಂತೆ ಆಗುವ ಟೋಕಲ್‌ಸೆಸ್ ದೇಖೀಲ್ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ ಇಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು ಹಾಂಗೆ ಡಿಪಾಜಿಟ್ಟು ಮೊಬಲಗು ಹಾಜರ್ಮಾಡದಿದ್ದರೂ ಅಥವಾ ಬಾಕಿ ಕ್ರಯದ ಮೊಬಲಗು ಪಾವತಿ ಮಾಡದಿದ್ದರೂ ಹಕ್ಕುದಾರಿಯು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ನುಕ್ಸಾನಿಗೂ ವಳಪಟ್ಟು ಪುನಹ ವಿಕ್ರಯಿಸಲ್ಪಡುವದು.

6. ಹರಾಜ್ ಷರತ್ತುಗಳು—

(a) ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡುವಳಿದಾರನ ಸಮ್ಮತಿಯನ್ನ ಪಡಿಯಬೇಕು. ಜಮೀನ್ ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂ ಕೂಡದು. ಇಜಾರೇದಾರನಿಗೆ ಮಾರಬೇಕೇ ಹೊರ್ತು ಇತರ ಜನಗಳಿಗೆ ಮಾರಲೂಕೂಡದು.

(b) ಇಜಾರ್‌ದಾರನು ಹುಲ್ಲುಬನ್ನಿ ಇಜಾರ್‌ದಾರರ ಚರಾವು ಹಕ್ಕಿನಲ್ಲಿ ಪ್ರವೇಶಿಸಕೂಡದು.

(c) ಬಂಜರು ಜಮೀನುಗಳು ಸಾಗುವಳಿ ಬಗ್ಗೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟುಬಿಡುವದಕ್ಕೆ ಕುರಂಗದ ಇಜಾರೆದಾರನು ಅಡ್ಡಿ ಹೇಳಕೂಡದು. ಅಂತಾ ಜಮೀನುಗಳಲ್ಲಿ ಕುರಂಗದ ಕಲ್ಲುಗಳನ್ನು ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಇಜಾರೆದಾರನಿಗೆ ವುಂದು ಇರುತ್ತೆ.

(d) ಇಜಾರೇದಾರನು ಕಲ್ಲುಗಳಿಗೋಸ್ಕರ ಜಮೀನುಗಳನ್ನ ಅಗಿಯಕೂಡದು. ಬಂಡು ವೇಳೆ ಹಾಗೆ ಅಗದಲ್ಲಿ ಆ ಗುಂಡಿಗಳನ್ನು ತಕ್ಷಣ ಮುಚ್ಚಿಬಿಟ್ಟು ಸಾಗುವಳಿಗೆ ಜಮೀನು ಲಾಯಖು ಇರುವ ಹಾಗೆ ಮಾಡಬೇಕು.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟ್ ಮಂಜರಾಬಾದ ಮತ್ತು ಹಾಸನ ತಾಲ್ಲೂಕುಗಳ ಈ ಕೆಳಗೆ ನಮೂದಾಗಲ್ಪಡುವ ಜಮೀನ್ ಕಾಫೀ ಸಾಗುವಳಿಗೋಸ್ಕರ ಇದರ ಕೆಳಗಿನ ಸ್ಪೇಟಿಮೆಂಟಿನ ಷರಾ ಕಾಲಂನಲ್ಲಿ ನಮೂದಾಗುವ ತಾರೀಖು ಮತ್ತು ಸ್ಥಳದಲ್ಲಿ ಹಾಸನ ಡಿಸ್ಟ್ರಿಕ್ಟ್ ಜನರಲ್ ಆಸಿಸ್ಟೆಂಟ್ ಕಮ್ಮಿಷನರವರ ರೂಬರೂಬ್ ಹಾಸನ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರ ಮಂಜೂರಾತಿಗೆ ವ್ಹೊಳಪಟ್ಟು ಪರಾಜು ಮಾಡಿಸಲ್ಪಡುವದು.

2. ಈ ಹರಾಜು ಬಹಿರಂಗವಾಗಿ ದಸ್ತೂರ್ ಪ್ರಕಾರ ಅನುಸರಿಸಿ ಗೊತ್ತಾಗಲ್ಪಟ್ಟ ಎಕರೆಗೆ 10 ರೂಪಾಯಿಗಳ ಮೇಲೆ ಜಡ ದರಖಾಸ್ತು ಮಾಡುವವರ ಹೆಸರಿಗೆ ಖೈದ್ ಮಾಡಲ್ಪಡುವದು, ದರಖಾಸ್ತುದಾರನಿಂದ ಪಾಜರ್ಯಾಡಲ್ಪಟ್ಟು ಗೊತ್ತಾಗಲ್ಪಟ್ಟ ಖರೀದಿಯ ನಾಲ್ಕರಲ್ಲಿ ಒಂದುಭಾಗ ಡಿಪಾಜಿಟ್ ಹಣವು ದರಖಾಸ್ತುದಾರನ ಹೆಸರಿಗೆ ಹರಾಜು ನಿಂತಪಕ್ಷ ಅವನು ಈ ನೋಟಿಸ್ 4ನೇ ಕ್ಲಾಜ್ ಮೇರಿಗೆ ಕೊಡಬೇಕಾದ ಶೇಕಡಾ 25 ರೂಪಾಯಿ ಹರಾಜು ಹಣದ ಡಿಪಾಜಿಟ್ಟಿಗೆ ವಜಾ ಮಾಡಲ್ಪಡುವದು, ಮತ್ತು ಇತರರು ಜಡ ದರಖಾಸ್ತು ಮಾಡಿ ಅವರಿಗೇನೇ ನಿಂತಪಕ್ಷ ದರಖಾಸ್ತುದಾರನ ಶೇವಣಿಯು ವಾಪಸ್ ಮಾಡಲ್ಪಡುವದು.

3. ಗೊತ್ತಾಗಲ್ಪಟ್ಟ ಖರೀದಿಯು ಸರ್ವೇ ಖರ್ಚನ್ನು ಅಡಗಿಸಿಕೊಂಡು ಯಿರುತ್ತಲ್ಲದೆ ಸಂದಲ್ ವಿನಹ ವ್ಹೊಳಸಿಕೊಳ್ಳಲ್ಪಟ್ಟ ಜಾತಿಯಲ್ಲಮರಗಳ ಗವರ್ಮೆಂಟ್ ಹಕ್ಕನ್ನೂ ಶೇರಿಸಿಕೊಂಡು ಯಿರುತ್ತೆ, ಸಂದಲ್ ಯಾವಾಗ್ಯೂ ಸರ್ಕಾರದ ಹಕ್ಕಿನದೇ ಆಗಿ ಯಿರುತ್ತೆ.

4. ಜಡ ದರಖಾಸ್ತುದಾರನು ಹರಾಜು ಖೈದಾದ ವಡನೆಯೇ ಶೇಕಡಾ 25 ರೂಪಾಯಿಗಳ ಮೇರೆ ಕೊಡಬೇಕಲ್ಲದೆ ಬಾಕ್ಕೀ ಹಣವನ್ನ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಹರಾಜಾದ ತಾರೀಖು ಲಾಗಾಯತು 15ನೇ ತಾರೀಖಿನ ದಿವಸದ ಸೂರ್ಯಾಸ್ತಮಯದೊಳಗೆ ಕೊಡಬೇಕು, ಹಾಗೆ ಕೊಡದೇ ತಪ್ಪಿದಲ್ಲಿ ಡಿಪಾಜಿಟ್ ಯಿಟ್ಟ ಮೊಬಲಗು ದಂಡವಾಗಿ ತೆಗದುಕೊಳ್ಳುವದಲ್ಲದೇ ಹರಾಜಿನಲ್ಲಿ ತೆಗದುಕೊಂಡವನ ಅವಗುಣಕ್ಕಾಗಿ ಪುನಶ್ಚ ಹರಾಜು ಮಾಡಿಸಲ್ಪಡುವದು 2ನೇ ಹರಾಜಿನಲ್ಲಿ ಕಮ್ಮಿ ಆಗುವ ಹಣವನ್ನು ಮೊದಲ್ ಹರಾಜು ದಾರನಿಂದ ವಸೂಲ್ ಮಾಡಲ್ಪಡುತ್ತೆ.

5. ಈ ರೂಲ್ಸ್ ಅನುಸರಿಸಿ ಹರಾಜ್ ಮಾಡಲ್ಪಟ್ಟ ಜಮೀನು ಮೂರುವರುಷ ಮುಫತ್ತಾಗಿಯೂ ನಂತರ ಯರಡು ವರುಷ ಅರ್ಧ ಕಂದಾಯಕ್ಕೂ ಆರನೇ ವರುಷದಿಂದ ಪೂರಾ ಕಂದಾಯಕ್ಕೂ ಕೊಡಲ್ಪಡುವದು, ಈ ರಿಯಾಯತಿಯನ್ನು ತೋರಿಸುವದಕ್ಕೆ ಮುಂಚೆ ಜಡ ದರಖಾಸ್ತುದಾರನು ಸದರೀ ಜಮೀನಿನಲ್ಲಿ ಇರತಕ್ಕ ಸಾಗುವಳೀ ಲಾಯಕ್ ಪ್ರಬೇಧವನ್ನು ನಿಜವಾಗಿಯೂ ಗಿಡಹಾಕುವದಕ್ಕೆ ಎತ್ನಪಡದೆ ಅಡವಿಯನ್ನು ತೆಗದು ಮರಗಳನ್ನು ಕಡಿದು ನಿಷ್ಕಾಮೀ ಮಾಡಿ ಕೊಟ್ಟಪ್ಪಿದ್ದೇ ಆದರೆ ಮೊದಲ್ ವರುಷದ ಲಾಗಾಯತು ಪೂರಾ ಕಂದಾಯವನ್ನೂ ಸರಕಾರಕ್ಕೆ ಕೊಡಲು ಬದ್ಧರಾಗಿ ಮುಚ್ಚಳಿಕೆ ಬರದುಕೊಡಿಸಿಕ್ಕು.

ಸೆಕ್ಕೋ ನಂಬರ್.	ದರಖಾಸ್ತುದಾರನ ಹೆಸರು.	ಜಮೀನು ಇರತಕ್ಕ ಗ್ರಾಮದ ಹೆಸರು.	ದರಖಾಸ್ತು ಜಮೀನು ವಿಸ್ತೀರ್ಣ.					ಷರಾ.
			ಎಕರೆ.		ಆಕಾರ.			
			ಎಕರೆ.	ಗುಂಟೆ.	ರೂ.	ಆ.	ಪೈ.	
112	ಸೆಸ್ಸನ್ಸ್ ಫಾರ್ಮರ್ಸ್ ಪ್ಲಾಂಟರುಗಳು	ಅಯಿದಕ್ಷೀನಮರಹಿರಂಗನ ಪಟ್ಟದವಾರೆ ಕಣಿವೆ, ಬನವನಹಳ್ಳಿಹೊಸಕೋಟೆ ಹೋಬಳಿ ಮಂಜರಾಬಾದ್ ತಾಲ್ಲೂಕು 102ನೇ ಸರ್ವೆ ನಂ. ಪೈಕಿ	155	34	1-0-0 ಕಾಯಂ ದರ ಅಥವಾ 1-0-0 ಟಿಂಬರು ದರ ಹರಾಜಿನಲ್ಲಿ ಹಾಜರಾಯಿಸುವ ರಿಯಾಯ್ತಿಗಳ			ಹಾಸನ ಡಿ|| ಜನರಲ್ ಆ|| ಕಮ್ಮಿಷನರವರು ಹಾಸನ ತಾಲ್ಲೂಕು ಸೊನ್ನಾಪುರದ ಹೋಬಳಿ ಕಂಬಿ ಚೂಲ್ಲೆ ಜೂರ ಗ್ರಾಮದಲ್ಲಿ 1890ನೇ ಇಸವಿ ಜುಲೈ 25ನೇ ತಾರೀಖು ಸಂಧ್ಯಾನ್ಹ 11 ಘಂಟೆಗೆ ಹರಾಜು ಮಾಡಲ್ಪಡುವದು.
91		ಹೊಸದಾಗಿ ಪೋಡಾದ್ದು ಗಜಗೊಂದಲ್ವಾರೆ ಆಡ್ಡಬೈಲ್ ಪೊನ್ನಾಪುರದ ಹೋಬಳಿ ಹಾಸನ ತಾಲ್ಲೂಕು 83ನೇ ಸರ್ವೆನಂ. ಪೈಕಿ ಹೊಸದಾಗಿ ಪೋಡಾದ್ದು	75	7				
54		ಬೆಳಿಗರವಳ್ಳಿ ಡಿಟೋ 17ನೇ ನಂ. ಪೈಕಿ ಡಿಟೋ	72	27				
51		ತಿಮ್ಮಲಾಪುರ ಡಿಟೋ 50ನೇ ನಂಬರ್ ಪೈಕಿ	58	3				
52		ಡಿಟೋ 22ನೇ ನಂ. ಪೈಕೀ	35	30				

436

1890ನೇ ಇಸವಿ 12ನೇ ಜೂ೯.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟ್ ಹೊಳೇನರಸೀಪುರ ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕುದಾರಿಯು ವ್ಯೊಂದು ದಫಾ ಹರಾಜ್ ಮಾಡಿಸಿದ್ದರಲ್ಲಿ ಯಾರೂ ದರಖಾಸ್ತು ಮಾಡಲಿಲ್ಲವಾಗಿ ಪುನಹ ಹೊಳೇನರಸೀಪುರ ತಾಲ್ಲೂಕು ಕಚ್ಚೇರಿಯಲ್ಲಿ ಸ೯ 1890ನೇ ಇಸವಿ ಜುಲೈ 18ನೇ ತಾರೀಖು ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜ್ ಮಾಡಲ್ಪಡುವದು.

2. ಅಮಲ್ದಾರ್ರು ಅಥವಾ ಕರನ್ತಿದಾರ್ರಾಗಲಿ ಹರಾಜ್ ಮಾಡಿಸುವರು.

3. ಈ ಹರಾಜಿನ ಬಡ ದರಖಾಸ್ತು ಹಾಸನ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡುವ ಪರಿಯಂತ್ರ ಖಾಯಂ ಆದ್ದಾಗಿ ತಿಳಿದು ಕೊಳ್ಳಕೂಡದು.

4. ಈ ಇಜಾರೆಯು ಸ೯ 1891ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿ ಯಿರತಕ್ಕದ್ದು.

5. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೀಕಡ 25 ರೂಪಾಯಿ ನಂತೆ ಆಗುವ ಮೊಬಲಗನ್ನು ಡಿಪಾಜಿಟ್ ಯಿಡಬೇಕಲ್ಲದೆ ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಡೆಪ್ಯೂಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 7 ದಿವಸದೊಳಗಾಗಿ ಕ್ರಯದ ಪೈಟ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ವ್ಯೊಂದಾಣೆಯಂತೆ ಆಗುವ ಲೋಕಲ್‌ಸೆಸ್ ದೇಖೀಲ್ ಬಾಕಿ ಕ್ರಯದ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ ಯಿಟ್ಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದು ಕೊಳ್ಳಲ್ಪಡುವದು, ಹಾಂಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡದಿದ್ದರು ಅಥವಾ ಬಾಕಿ ಕ್ರಯದ ಮೊಬಲಗು ಹಾಜರ್ಮಾಡದಿದ್ದರು ಹಕ್ಕುದಾರಿಯು ಆವ್ವಲ್ ಕ್ರಯದಾರನ ಖರ್ಚಿಗೂ ಮತ್ತು ನುಕ್ಸಾನಿಗೂ ಒಳಪಟ್ಟು ಪುನಹ ವಿಕ್ರಯಿಸಲ್ಪಡುವದು.

6. ಹರಾಜು ಷರತ್ತುಗಳು.

(a) ಹಿಡುವಳಿ ಜಮೀನಿನಲ್ಲಿ ಯಿರತಕ್ಕ ಕಲ್ಲುಗಳನ್ನ ತೆಗದುಕೊಳ್ಳಬೇಕಾದರೆ ಹಿಡುವಳಿದಾರ್ರ ಸಮ್ಮತಿಯನ್ನೆ ಪಡಿಯಬೇಕು. ಜಮೀನ್ ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವಂತಪ್ರಯೋಜನಕ್ಕಾಗಿ ತೆಗದು ಕೊಳ್ಳಲೂ ಕೂಡದು, ಯಿಜಾರೆದಾರನಿಗೆ ಮಾಡಬೇಕೇ ಹೊರ್ತು ಯಿತರ ಜನಗಳಿಗೆ ಮಾರಲೂ ಕೂಡದು.

(b) [illegible] ಹುಲ್ಲು ಬನ್ನಿ ಯಿಜಾರೆದಾರರ ಚರಾವು ಹಕ್ಕಿನಲ್ಲಿ ಪ್ರವೇಶಿಸ ಕೂಡದು.

(c) ಬಂಜರು ಜಮೀನ್‌ಗಳು ಸಾಗುವಳಿ ಬಗ್ಯೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟು ಬಿಡುವದಕ್ಕೆ ಕುರಂಗದ ಯಿಜಾರೆದಾರನು ಅಡ್ಡಿ ಹೇಳಕೂಡದು. ಅಂಥಾ ಜಮೀನ್‌ಗಳಲ್ಲಿ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಯಿಜಾರೆದಾರನಿಗೆ ವುಳಿದಿರುತ್ತೆ.

(d) ಯಿಜಾರೆದಾರನು ಕಲ್ಲು ಗಳಿಗೋಸ್ಕರ ಜಮೀನ್‌ಗಳನ್ನ ಅಗಿಯಕೂಡದು. ಬಂದು ವೇಳೆ ಹಾಗೆ ಅಗದಲ್ಲಿ ಆ ಗುಂಡಿಗಳನ್ನ ತಕ್ಷಣ ಮುಚ್ಚಿ ಬಿಟ್ಟು ಸಾಗುವಳಿಗೆ ಜಮೀನ್ ಲಾಯಕ್ ಯಿರುವ ಹಾಂಗೆ ಮಾಡಬೇಕು.

ಸಿ. ಮಾದಯ್ಯ,
ಅಫಿಷಿಯೇಟಿಂಗ್ ಡೆಪ್ಯೂಟಿ ಕಮ್ಮಿಷನರ್.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನ್ಯೆಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫಿಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡ್‌ಗಳು ತೆಗದುಕೊಳ್ಳುವಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 3—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ 7—4—0; ಒಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟಾನಿಕಲ್ ಗಾರ್ಡನ್ ಸೂಪರ್ಟಿಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಬಂದಕ್ಕೆರೂ. 4—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 9—4—0; ಒಂದು ಪೌಂಡ್‌ವುಳ್ಳ ಡಬ್ಬಿಗೆ 17 ರೂ. 8 ಆಣೆ, ಈ ಔಷಧವು ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ವ ನೇಟಿವ್ ಮದ್ದಿನಂಗಡಿಯವರಿಂದ ಮಾರ್ಲ್ಪಡುತ್ತೆ, ಸದರೀ ಕಿಮ್ಮತಿನೊಂದಿಗೆ ದರ 4 ಔನ್ಸ್ ತಗರದ ಡಬ್ಬಿಗೆ 4 ಆಣೆಯೂ, 8 ಔನ್ಸ್ ತಗರದ ಡಬ್ಬಿಗೆ 8 ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.